ಸಾರ್ವಜನಿಕ ಗ್ರಂಥಾಲಯಗಳು ಇಂದಿನ ಆಧುನಿಕಯುಗದಲ್ಲಿಜ್ಞಾನದತೃಷೆಯನ್ನು ಹಿಂಗಿಸಲು ಸಮಾಜದಲ್ಲಿತನ್ನದೇಆದಛಾಪನ್ನು ಮೂಡಿಸಿದೆ. ಸ್ನೇಹ, ವಿಶ್ವಾಸ, ನಂಬಿಕೆ ಎನ್ನುವ ಮೌಲ್ಯಗಳು ಮನುಷ್ಯನ ಹೃದಯವಂತಿಕೆಯನ್ನು ಬಿಂಬಿಸದೇಅವನಲ್ಲಿರುವ ಬು ದ್ಧಿವಂತಿಕೆಯನ್ನುಸಾಬೀತುಪಡಿಸುತ್ತಿರುವಂತಹ ಈ ಸಂದರ್ಭದಲ್ಲಿ ಗ್ರಂಥಗಳು ಮಾನವನ ನಿಜವಾದ ಸ್ನೇಹ, ವಿಶ್ವಾಸ, ನಂಬಿಕೆ ಎನ್ನುವ ನಿಜಾರ್ಥವನ್ನು ನೀಡಿ ಮಾನವನಿಗೆ ಸಹಕಾರಿಯಾಗಿದೆ. ಪುಸ್ತಕಗಳಲ್ಲಿಯ ಚೈತನ್ಯದಾಯಕಜ್ಞಾನವು ವಿಶ್ವ ಸ್ವರೂಪಿಯಾಗಿಓದುಗನ ಮನಸ್ಸಿಗೆ ಭಾವನೆಗೆ ಬುದ್ಧಿಗೆ ಜ್ಞಾನಾಮೃತವನ್ನುಧಾರೆಎರೆಯುತ್ತಿದೆ. ನಿಜವಾದಓದು ಮತ್ತುಅಧ್ಯಯನಜ್ಞಾನ ನೀಡುವುದಲ್ಲದೆಓದುಗನ ಮೈಮನ ಕೇಂದ್ರೀಕೃತಗೊಂಡುತನುಮನದಆರೋಗ್ಯವನ್ನುಖಂಡಿತ ವೃದ್ಧಿಸುತ್ತೆಂಬುದು ಬುದ್ಧಿ ಜೀವಿಗಳ ಅನುಭವದ ಮಾತಾಗಿದೆ.

ಈ ಜ್ಞಾನ ಭಂಡಾರದಅಮೂಲ್ಯ ಆಸ್ತಿಗಳಾದ ಪುಸ್ತಕಗಳನ್ನು ಸಂಗ್ರಹಿಸಿ ಒಂದೆಡೆಓರಣವಾಗಿಒಪ್ಪವಾಗಿಜ್ಞಾನ ಪಿಪಾಸುಗಳಿಗೆ ಒಂದೆಡೆ ಲಭ್ಯವಾಗಲಿ ಎಂಬ ಸದಾಶಯದೊಂದಿಗೆರಾಹಮಹಾರಜರ ಕಾಲದಿಂದಲೂ ವೈಭವೋಪೇತ ಐತಿಹಾಸಿಕ ಕಟ್ಟಡಗಳನ್ನು ನಿರ್ಮಿಸಿ ಗ್ರಂಥಾಲಯಗಳಿಗೆ ಮೀಸಲಿರಿಸಿದ್ದು ಗ್ರಂಥಾಲಯಗಳಿಗೆ ಚರಿತ್ರೆ ನೀಡಿದ ಮೌಲ್ಯವನ್ನು ಸಾರುತ್ತದೆ.

ಸಾಂಸ್ಕೃತಿಕ ನಗರವೆಂದೆಖ್ಯಾತಿ ಪಡೆದ ಮೈಸೂರಿನಲ್ಲಿ ಪ್ರಾರಂಭಿಸಲಾದ ನಗರಕೇಂದ್ರಗ್ರಂಥಾಲಯದ ಪಾರಂಪರಿಕಕಟ್ಟಡವುಗ್ರಂಥಾಲಯಚರಿತ್ರೆಯಒಂದು ಮಗ್ಗುಲನ್ನುತೋರುತ್ತಿದೆ. ಆಗಿನ ಮೈಸೂರು ಮಹಾರಾಜರಾಗಿದ್ದ ನಾಲ್ವಡಿಕೃಷ್ಣರಾಜಒಡೆಯರ್‌ಮತ್ತು ಆಗಿನ ದಿವಾನರಾಗಿದ್ದು ಸರ್. ಎಂ. ವಿಶ್ವೇಶ್ವರಯ್ಯ ಹಾಗೂ ಮಿರ್ಜಾಇಸ್ಮಾಯಿಲ್, ಬಿ.ಎಂ. ಶ್ರೀಕಂಠಯ್ಯ, ಡಾ|| ಸರ್ವಪಲ್ಲಿರಾಧಾಕೃಷ್ಣನ್‌ರಂತಹ ಮಹನೀಯರ ಸಂಕಲ್ಪದಿಂದ ದಿ: 15.10.1915ರಂದುಯುವರಾಜ ನರಸಿಂಹರಾಜ ಒಡೆಯರ್‌ರವರಅಮೃತ ಹಸ್ತ ದಿಂದಉದ್ಘಾಟನೆಗೊಂಡು ಜ್ಞಾನದಾಹಿಗಳಿಗೆ, ಸಾಹಿತಿಗಳಿಗೆ, ವಿದ್ವಾಂಸರಿಗೆ, ಕಲಾವಿದರಿಗೆ, ಸಂಗೀತಾಸಕ್ತರಿಗೆಜ್ಞಾನದ ಹಸಿವನ್ನು ಈ ಗ್ರಂಥಾಲಯವುಉಣಬಡಿಸಬೇಕೆಂಬ ಸದಾಶಯದೊಂದಿಗೆಗ್ರಂಥಾಲಯವನ್ನುಪ್ರಾರಂಭಿಸಲಾಯಿತು. ಈ ಶ್ರೀಮಂತ ಗ್ರಂಥಾಲಯವನ್ನು1965ರಕರ್ನಾಟಕ ಸಾರ್ವಜನಿಕಗ್ರಂಥಾಲಯಕಾಯ್ದೆಯಂತೆಇಲಾಖೆಯಅ ಧೀನಕ್ಕೆ ಸಾರ್ವಜನಿಕರಿಗೆ ಮುಕ್ತವಾದಗ್ರಂಥಾಲಯ ಸೇವೆ ಒದಗಿಸಲಾಗುತ್ತಿದೆ.

ಈಗ ಮೈಸೂರು ನಗರದ ಪೂಜ್ಯ ಮಹಾಪೌರರಅಧ್ಯಕ್ಷತೆಯಲ್ಲಿ ಮೈಸೂರು ಪ್ರಾ ಧಿಕಾರರಚನೆಯಾಗಿಗ್ರಂಥಾಲಯದಜಾಲವನ್ನು ನಗರದ ವಿವಿಧ ಬಡಾವಣೆಗಳಲ್ಲಿ ಶಾಖಾ ಗ್ರಂಥಾಲಯಗಳು ಹಾಗೂ ಉಪ ಶಾಖೆಗಳಾಗಿ ರಚಿಸಿ ಸಾರ್ವಜನಿಕರಿಗೆ ಮುಕ್ತ ಗ್ರಂಥಾಲಯ ಸೇವೆಯನ್ನು ನೀಡಿ ಸಾರ್ವಜನಿಕರ ಪ್ರೀತಿಗೆಪಾತ್ರವಾಗಿದ್ದು, ಈಗ ಇದು ನಿತ್ಯ ಭೇಟಿತಾಣವಾಗಿದೆ.

ದಿ: 12.08.2015ರಂದು ಮೈಸೂರು ನಗರದ ಪಾರಂಪರಿಕಗ್ರಂಥಾಲಯಕಟ್ಟಡದ ಶತಮಾನೋತ್ಸವ ಸಮಾರಂಭವನ್ನು ಹಮ್ಮಿಕೊಂಡಿದ್ದು ಹಾಗೂರಾಜ್ಯ ಮಟ್ಟದಗ್ರಂಥಪಾಲಕರ ದಿನಾಚರಣೆಯನ್ನು ಮೈಸೂರು ನಗರದಲ್ಲಿಯೇ ಹಮ್ಮಿಕೊಂಡು ನಾಡಿನಾದ್ಯಂತಇರುವ ಪ್ರಸಿದ್ಧ ಸಾಹಿತಿಗಳನ್ನು ಹಾಗೂ ಸಾಃಇತ್ಯಾಸಕ್ತರನ್ನು, ಪುಸ್ತಕ ಪ್ರೇಮಿಗಳನ್ನೂ ಒಂದೆಡೆ ಸೇರಿಸಿಕೊಂಡು ಇಲಾಖೆಯಿಂದಆಚರಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಈ ಸಂದರ್ಭದ ಸವಿನೆನಪಿಗಾಗಿ ಹೊರತರುತ್ತಿರುವ ಹೊತ್ತಿಗೆಯುಚಾರಿತ್ರಿಕ ಮೈಲುಗಲ್ಲುದಾಖಲಿಸಲಿ ಎಂದು ಹಾರೈಸುತ್ತ ಗ್ರಂಥಾಲಯಗಳು ನಿರಂತರವಾಗಿ ಜ್ಞಾನದಾಹಿಗಳ ಮನತಣಿಸುವಂತೆ ಮುಂದುವರೆಯಲಿ ಎಂದು ಹಾರೈಸುತ್ತೇನೆ.

ಡಾ|| ಸತೀಶಕುಮಾರ್ಎಸ್. ಹೊಸಮನಿ
ನಿರ್ದೇಶಕರು,
ಸಾರ್ವಜನಿಕಗ್ರಂಥಾಲಯ ಇಲಾಖೆ,
ವಿಶ್ವೇಶ್ವರಯ್ಯ ಮುಖ್ಯಗೋಪುರ,
4 ನೇ ಮಹಡಿ, ಡಾ|| ಅಂಬೇಡ್ಕರ್ ವೀದಿ,
ಬೆಂಗಳೂರು–560 001.